

# ದೆಹಲಿಯ ಉಸಿರು ಉಳಿಸುವ ಲೋಧಿ ಉದ್ಯಾನ

■ ನಿರಂಜನ ವಾನಳ್ಳಿ

ಇತ್ತೀಚೆಗೆ ಪತ್ರಿಕೆಗಳ ಹಾಗೂ ಮಾಧ್ಯಮಗಳ ವರದಿ ನೋಡಿದರೆ ದೆಹಲಿಯಲ್ಲಿ ಉಸಿರಾಡುವುದೇ ಕಷ್ಟ, ದೆಹಲಿಯ ವಾಯುಮಾಲಿನ್ಯ ಮಿತಿಮೀರಿದೆ. ಆದರೆ ಹೆದರುತ್ತಲೇ ದೆಹಲಿಗೆ ಬಂದರೆ ಇಲ್ಲಿ ಎಲ್ಲಾ ಮಾಮೂಲಿನಂತಿದೆ. ಯಾರಿಗೂ ಮಾಲಿನ್ಯದ ಭಯವಿಲ್ಲ. ದೆಹಲಿಯ ಕೆಂಪು ಕೋಟೆಯ ಸನಿಹ ಇತ್ತೀಚೆಗೆ ಕಾರ್ ಬಾಂಬ್ ಸ್ಫೋಟವಾಗಿದ್ದನ್ನು ನೆನೆಸಿಕೊಂಡು ದೆಹಲಿ ಭಯದಲ್ಲೇ ಬದುಕುತ್ತಿರಬಹುದು ಎಂದುಕೊಂಡರೆ ಅದು ಸುಳ್ಳು. ಜನರು ಏನೂ ಆಗಿಲ್ಲವೆಂಬಂತೆ ನಿಶ್ಚಿಂತೆಯಿಂದ ಓಡಾಡಿಕೊಂಡಿದ್ದಾರೆ.

ಆದರೆ... ದೆಹಲಿ ಮಲಿನಗೊಂಡಿರುವುದು ನಿಜ. ಅದು ವಾಯುಮಾಲಿನ್ಯವಿರಬಹುದು, ಜಲಮಾಲಿನ್ಯವಿರಬಹುದು, ಒಟ್ಟೂ ಭೂ ಮಾಲಿನ್ಯವಿರಬಹುದು. ದೇಶದ ರಾಜಧಾನಿಯ ಪರಿಸ್ಥಿತಿ ಆತಂಕಕಾರಿಯಾಗಿದೆ. ಆದರೂ ದೆಹಲಿ ಬದುಕಿರುವುದು, ಇನ್ನೂ ಉಸಿರಾಡುತ್ತಿರುವುದು, ಹಸಿರು ಹೊದಿಕೆಯಿಂದಾಗಿ. ನಮ್ಮ ಪೂರ್ವಜರು ದೂರಗಾಮಿ ಕಲ್ಪನೆಯಿಂದ ಕಟ್ಟಿದ ಲೋಧಿ ಉದ್ಯಾನದಂಥ ಸಸ್ಯೋದ್ಯಾನಗಳು ದೆಹಲಿಯಲ್ಲಿ ಇನ್ನೂ ಉಸಿರಾಡಲು ಅವಕಾಶ ಕಲ್ಪಿಸಿವೆ.

ಲೋಧಿ ಗಾರ್ಡನ್ ನವದೆಹಲಿಯ ಹೃದಯದಲ್ಲಿರುವ ಹಸಿರು ಉದ್ಯಾನ. ಇದು ಕಟ್ಟಲಾಗಿದ್ದು, 15–16ನೇ ಶತಮಾನದಲ್ಲಿ. ಮೂಲತಃ ಇದು ಅಂದಿನ ರಾಜಮನೆತನದವರ ಅಥವಾ ದೊಡ್ಡ ಜನಗಳ ಗೋರಿ. 90 ಎಕರೆಗಳಷ್ಟು ವಿಸ್ತಾರವಾಗಿರುವ ಲೋಧಿ ಗಾರ್ಡನ್‌ನಲ್ಲಿ ಸಾವಿರಾರು ಸಸ್ಯಸಂಕುಲಗಳಿವೆ. ಪಕ್ಷಿಗಳ, ಚಿಟ್ಟೆಗಳ ಉದ್ಯಾನಗಳಿವೆ. ಹೊರಗಿನ ವಾತಾವರಣಕ್ಕಿಂತ ಎರಡು ಡಿಗ್ರಿಯಷ್ಟು ಉಷ್ಣತೆ ಇಲ್ಲಿ ಕಡಿಮೆ ಇರುತ್ತದೆ. ಇದರಿಂದಾಗಿ ಪ್ರತಿದಿನ ಇಲ್ಲಿ ಸಾವಿರಾರು ಜನ ಅಡ್ಡಾಡಲು ಬರುತ್ತಾರೆ. ವ್ಯಾಯಾಮ ಮಾಡಲು ಬರುತ್ತಾರೆ, ಜೋಡಿ ಕುಳಿತು ಹರಟಲು ಬರುತ್ತಾರೆ, ಫೋಟೊ ತೆಗೆದುಕೊಳ್ಳಲು ಬರುತ್ತಾರೆ.



ಏನಿಲ್ಲವೆಂದರೆ ಬಂದು ನಿಶ್ಚಿಂತೆಯಿಂದ ನಿದ್ದೆ ಮಾಡುತ್ತಾರೆ. ವಾಹನಗಳು ಹಾಗೂ ಜನರ ದಟ್ಟಣೆ ನಡುವೆ ನವದೆಹಲಿಯಲ್ಲಿ ಈ ಕೆಲಸಗಳಿಗೆ ಇದಕ್ಕಿಂತ ಒಳ್ಳೆಯ ತಾಣ ಇನ್ನೆಲ್ಲಿ ಸಿಕ್ಕೀತು? ಬೆಳಗಿನ ಆರರಿಂದ ರಾತ್ರಿ ಎಂಟರವರೆಗೆ ಲೋಧಿ ಉದ್ಯಾನ ಪ್ರವಾಸಿಗಳ ತಾಣವಾಗಿರುತ್ತದೆ.

ಲೋಧಿ ಉದ್ಯಾನದಲ್ಲಿ ಸಾವಿರಕ್ಕೂ ಹೆಚ್ಚು ಜಾತಿಯ ಸಸ್ಯಗಳಿವೆ. ಕೀಟಗಳೂ ಪಕ್ಷಿಗಳೂ ಬಹಳಷ್ಟಿವೆ. ಇದು ನಗರ ಮಧ್ಯದಲ್ಲಿ ಇರಬಹುದೆಂಬ ಕಲ್ಪನೆಯೂ ಬಾರದ ರೀತಿ ಹಸಿರು ದಟ್ಟವಾಗಿ ಹಬ್ಬಿದೆ. 15–16ನೆಯ ಶತಮಾನದಲ್ಲಿ ಲೋಧಿ ಸಾಮ್ರಾಜ್ಯದವರು ಕಟ್ಟಿರಬಹುದಾದ ಈ ಗೋರಿಗಳು ಈಗ ಯಾರ್‍ಯಾರದು ಎಂಬ ಬಗ್ಗೆ ಸ್ಪಷ್ಟ ಉಲ್ಲೇಖಗಳಿಲ್ಲ. ಮೂಲತಃ ಲೋಧಿ ವಂಶಸ್ಥರು ದೆಹಲಿಯನ್ನು ಆಳಿದ್ದು 1451ರಿಂದ 1526ರವರೆಗೆ ಮಾತ್ರ. ಅಂದರೆ ಅವರ ಆಳ್ವಿಕೆ 75 ವರ್ಷ. ಈ ಅವಧಿಯಲ್ಲಿ ಮೂವರು ಸುಲ್ತಾನರು ಮೊದಲನೆಯವ ಬಹುಲಾಲ್ ಲೋಧಿ 38 ವರ್ಷ ದೆಹಲಿಯನ್ನು ಆಳಿದರು. ಇವನ ಮಗ ಸಿಕಂದರ ಖಾನ್ ಲೋಧಿ, ಎರಡನೆಯವ ಹಾಗೂ ಇಬ್ರಾಹಿಂ ಲೋಧಿ ಮೂರನೆಯವ. ಇಬ್ರಾಹಿಂ ಲೋಧಿಯನ್ನು ಪಾಣಿಪಟ್ ಕದನದಲ್ಲಿ ಬಾಬರನ ಸೈನ್ಯ ಸೋಲಿಸಿತು ಮಾತ್ರವಲ್ಲ ಈ ದೇಶದಲ್ಲಿ ಮೊಘಲರ ಸಾಮ್ರಾಜ್ಯ ಸ್ಥಾಪನೆಗೆ ನಾಂದಿ ಹಾಡಿತು. ಸಯೀದ್ ವಂಶ ಹಾಗೂ ಮೊಘಲರ ಆಳ್ವಿಕೆಯ ನಡುವಿನ 75 ವರ್ಷ ದೆಹಲಿಯನ್ನು ಆಳಿದ ಲೋಧಿ ವಂಶ ದೆಹಲಿಗೆ ಕೊಟ್ಟ ಕಾಲಾತೀತ ಕೊಡುಗೆಗಳಲ್ಲಿ ಲೋಧಿ ಗಾರ್ಡನ್ ಒಂದು.

ಅದೇನೇ ಇದ್ದರೂ ಲೋಧಿ ಉದ್ಯಾನ ಲೋಧಿ ವಂಶಸ್ಥರ ಹೆಸರು ಉಳಿಸಿದೆ. ನವದೆಹಲಿಗೆ ಇಂದು ಅನಿವಾರ್ಯವಾಗಿ ಬೇಕಾದ ಹಸಿರಿನ ಲೋಕ ಸೃಷ್ಟಿಸಿ ದೆಹಲಿಯ ಜನ ಒಂದಷ್ಟು ಉಸಿರಾಡಲು ಆಸ್ಪದ ಮಾಡಿಕೊಟ್ಟಿದೆ. ಈಗ ನವದೆಹಲಿಗೆ ಹೋದವರು ನೋಡಬೇಕಾದ ಸ್ಥಳವಾಗಿ ಲೋಧಿ ಗಾರ್ಡನ್ ಮಾರ್ಪಟ್ಟಿದೆ. ■